/572554/2024

**ಕರ್ನಾಟಕ ಸರ್ಕಾರ**
**ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ:ಡಿಟಿಇ 10 ಸಿಡಿಸಿ(1) 2024 (1344752)

ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ,
ಅರಮನೆ ರಸ್ತೆ,
ಬೆಂಗಳೂರು-560001,
ದಿನಾಂಕ:05-03-2024.

**ಜ್ಞಾಪನ**

ವಿಷಯ: ರಾಜ್ಯದ ಸರ್ಕಾರಿ ಪಾಲಿಟೆಕ್ನಿಕ್‌ಗಳು ಡಿಪ್ಲೋಮಾ ಪ್ರೋಗ್ರಾಂಗಳಿಗೆ NBA ಮಾನ್ಯತೆ ಪಡೆಯುವ ಬಗ್ಗೆ.

ಉಲ್ಲೇಖ
1. ಎಐಸಿಟಿಇ, ನವದೆಹಲಿ ಇವರ ರೆಗ್ಯುಲೇಷನ್ಸ್ F.No. 373/legal/AICTE/2014, ದಿನಾಂಕ: 29.01.2014
2. ಈ ಕಛೇರಿ ಪತ್ರ ಸಂಖ್ಯೆ: DTE-CDC0CDC(1)/14/2021-JDCDC-DEPTTECH EDUCATION, ದಿನಾಂಕ: 23.03.2021
3. ಈ ಕಛೇರಿ ಪತ್ರ ಸಂಖ್ಯೆ: ತಾಂ.ಶಿ.ನಿ. 50 ಡಿವಿಪಿ(1) 2021, ದಿನಾಂಕ: 23.03.2022

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರನ್ವಯ ರಾಜ್ಯದ ಎಲ್ಲಾ ಪಾಲಿಟೆಕ್ನಿಕ್‌ಗಳು ನಡೆಸುವ ಡಿಪ್ಲೋಮಾ ಪ್ರೋಗ್ರಾಂಗಳಿಗೆ NBA ಮಾನ್ಯತೆ ಪಡೆಯುವುದನ್ನು AICTE ರವರು ಕಡ್ಡಾಯಗೊಳಿಸಿರುತ್ತಾರೆ.

ಉಲ್ಲೇಖ(2)ರನ್ವಯ ರಾಜ್ಯದ ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್‌ಗಳು ತಮ್ಮ ಸಂಸ್ಥೆಯಲ್ಲಿನ ಪ್ರೋಗ್ರಾಂಗಳಿಗೆ NBA ಮಾನ್ಯತೆ ಪಡೆಯುವ ಸಂಬಂಧ ಎಲ್ಲಾ ಕಾರ್ಯಚಟುವಟಿಕೆಗಳನ್ನು ಪ್ರಾರಂಭಿಸಲು ಇಲಾಖೆಯಿಂದ ಸೂಚಿಸಲಾಗಿತ್ತು.

ಉಲ್ಲೇಖ (3) ರನ್ವಯ ಸರ್ಕಾರವು ಪಾಲಿಟೆಕ್ನಿಕ್ ಡಿಪ್ಲೋಮಾ ಪ್ರೋಗ್ರಾಂಗಳಿಗೆ NBA ಮಾನ್ಯತೆ ಪಡೆಯುವ ಸಲುವಾಗಿ ಅನುದಾನವನ್ನು ಈಗಾಗಲೇ ಬಿಡುಗಡೆಗೊಳಿಸಲಾಗಿದೆ. ಮುಂದುವರೆದು, ಪ್ರಸಕ್ತ ಸಾಲಿನಲ್ಲಿನ ಮಹಾಲೇಖಪಾಲರ ತಪಾಸಣೆ ಸಮಯದಲ್ಲಿ ಪಾಲಿಟೆಕ್ನಿಕ್‌ಗಳಿಂದ NBA ಅನುದಾನವನ್ನು ಬಳಕೆ ಮಾಡಿರುವ ಬಗ್ಗೆ ಮಾಹಿತಿ ಮತ್ತು ರಶೀದಿಯನ್ನು ಕೇಳಿರುತ್ತಾರೆ. ಈ ಹಿನ್ನೆಲೆಯಲ್ಲಿ ದಿನಾಂಕ: 20.02.2024ರಂದು ಸಹಾಯಕ ನಿರ್ದೇಶಕರು (ಸಿಡಿಸಿ) ರವರು ಕೋಷ್ಟಕದಲ್ಲಿ ತಿಳಿಸಿರುವ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳಿಗೆ ದೂರವಾಣಿ ಕರೆ ಮೂಲಕ ತಮ್ಮ ಸಂಸ್ಥೆಗೆ ಬಿಡುಗಡೆ ಮಾಡಲಾಗಿರುವ NBA ಅನುದಾನವನ್ನು ದಿನಾಂಕ: 29.02.2024ರ ಒಳಗಾಗಿ ರಾಷ್ಟ್ರೀಯ ಮಾನ್ಯತಾ ಮಂಡಳಿಗೆ ಸಂದಾಯ ಮಾಡಿ ಅದರ ವಿವರ ಮತ್ತು ರಶೀದಿಯನ್ನು ಇಲಾಖೆಗೆ ಸಲ್ಲಿಸಲು ಸೂಚಿಸಿರುತ್ತಾರೆ.

ಆದ್ದರಿಂದ ದಿನಾಂಕ: 05.03.2024 ರ ಒಳಗಾಗಿ ಕೋಷ್ಟಕದಲ್ಲಿ ತಿಳಿಸಿರುವ ಪ್ರಾಂಶುಪಾಲರುಗಳು ರಾಷ್ಟ್ರೀಯ ಮಾನ್ಯತಾ ಮಂಡಳಿಗೆ ಅನುದಾನವನ್ನು ಸಂದಾಯ ಮಾಡಿರುವ ವಿವರಗಳನ್ನು ಜಂಟಿ ನಿರ್ದೇಶಕರು(ಸಿಡಿಸಿ) ಇವರಿಗೆ ಸಲ್ಲಿಸಲು ಸೂಚಿಸಲಾಗಿದೆ. ಸದರಿ ವಿವರಗಳನ್ನು ನಿಗದಿತ ದಿನಾಂಕದೊಳಗೆ ಸಲ್ಲಿಸದಿದ್ದಲ್ಲಿ, ಪ್ರಾಂಶುಪಾಲರುಗಳು ಹಾಗೂ DDO ಗಳು ನೇರ ಹೊಣೆಗಾರರಾಗಿರುತ್ತಾರೆ ಎಂದು ಈ ಮೂಲಕ ತಿಳಿಸಲಾಗಿದೆ.

**ಕೋಷ್ಟಕ**

| ಕ್ರ. ಸಂ. | ಪಾಲಿಟೆಕ್ನಿಕ್‌ಗಳ ಹೆಸರು |
|---|---|
| 1. | ಸರ್ಕಾರಿ ಪಾಲಿಟೆಕ್ನಿಕ್, ತುಮಕೂರು |
| 2. | ಸರ್ಕಾರಿ ಪಾಲಿಟೆಕ್ನಿಕ್, ಚನ್ನಪಟ್ಟಣ |
| 3. | ಸರ್ಕಾರಿ ಪಾಲಿಟೆಕ್ನಿಕ್, ರಾಮನಗರ |
| 4. | ಸರ್ಕಾರಿ ಪಾಲಿಟೆಕ್ನಿಕ್, ಹೊಳೆನರಸೀಪುರ |
| 5. | ಸರ್ಕಾರಿ ಪಾಲಿಟೆಕ್ನಿಕ್, ಚಿತ್ರದುರ್ಗ |
| 6. | ಡಿ.ಆರ್.ಆರ್.. ಸರ್ಕಾರಿ ಪಾಲಿಟೆಕ್ನಿಕ್, ದಾವಣಗೆರೆ |
| 7. | ಶ್ರೀಮತಿ ಎಲ್.ವಿ. ಸರ್ಕಾರಿ ಪಾಲಿಟೆಕ್ನಿಕ್, ಹಾಸನ |
| 8. | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಹಾಸನ |

/572554/2024

| | |
|---|---|
| 9. | ವಿಐಎಸ್ಎಸ್‌ಜೆ ಸರ್ಕಾರಿ ಪಾಲಿಟೆಕ್ನಿಕ್, ಭದ್ರಾವತಿ |

"ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ".

Signed by
Prasanna H
Date: 05-03-2024 13:30:59

**ನಿರ್ದೇಶಕರು**

ಇವರಿಗೆ,

ಪ್ರಾಂಶುಪಾಲರು, ಸರ್ಕಾರಿ ಪಾಲಿಟೆಕ್ನಿಕ್, ತುಮಕೂರು, ಚನ್ನಪಟ್ಟಣ, ರಾಮನಗರ, ಹೊಳೆನರಸೀಪುರ, ಚಿತ್ರದುರ್ಗ, [illegible], ಡಿ.ಆರ್.ಆರ್. ಸರ್ಕಾರಿ ಪಾಲಿಟೆಕ್ನಿಕ್, ದಾವಣಗೆರೆ, ಶ್ರೀಮತಿ ಎಲ್.ವಿ. ಸರ್ಕಾರಿ ಪಾಲಿಟೆಕ್ನಿಕ್, ಹಾಸನ, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಹಾಸನ ಹಾಗೂ ವಿಐಎಸ್ಎಸ್‌ಜೆ ಸರ್ಕಾರಿ ಪಾಲಿಟೆಕ್ನಿಕ್, ಭದ್ರಾವತಿ.